1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

ವಿಶೇಷ ಮೊಕದ್ದಮೆ ಸಂಖ್ಯೆಃ- 215/2024

ಪ್ರಾಸಾಃ- 15 ಚಾಸಾಃ- 18

| | | |
|---|---|---|
| ಸಾಕ್ಷಿಯ ಹೆಸರು | : | ಕೃಷ್ಣಾ ನಾಯಕ್.ಎ |
| ತಂದೆಯ ಹೆಸರು | : | ಅಣ್ಣಪ್ಪ |
| ವಯಸ್ಸು | : | 43 ರ್ಷ |
| ವೃತ್ತಿ | : | ಪಿ ಐ, ರೈಲ್ವೇ ಪೋಲೀಸ್ ಠಾಣೆ, ದಾವಣಗೆರೆ |
| ವಾಸಸ್ಥಳ | : | ದಾವಣಗೆರೆ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 20.6.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ದಿಃ 26-10-2020 ರಿಂದ 1-12-2022 ರವರೆಗೆ ನಾನು ಪಿ ಐ ಡಿ ಸಿ ಆರ್ ಇ ದಾವಣಗೆರೆ ಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿಃ 21-9-2021 ರಂದು ಪೋಲೀಸ್ ಅಧೀಕ್ಷಕರರು ಡಿ ಸಿ ಆರ್ ಇ ದಾವಣಗೆರೆ ರವರ ಆದೇಶದಂತೆ ಪ್ರಕರಣದ ತನಿಖೆಯನ್ನುನಾನು ದಿಃ 7-3-202 ರಂದು ಎಸ್ ಪಿ ರವರಿಂದ ಪೆಡದು ತನಿಖೆಯನ್ನು ಮುಂದುವರೆಸಿದ್ದೆ. ಆದೇಶದ ಪ್ರತಿಯನ್ನು ನಿಪಿ-48 ಎಂದು ಗುರುತಿಸಲಾಯಿತು.

ದಿಃ 21-4-2022 ರಂದು 1 ನೇ ಆರೋಪಿಗೆ ಸಂಬಂಧಪಟ್ಟ ಜಾತಿ ಪ್ರಮಾಣ ಪತ್ರವನ್ನು ನೀಡಿದ್ದ ಅಂದಿನ ತಹಸೀಲ್ದಾರ್ ಶಶಿಧರ ಬಗಲಿ ರವರ ಹೇಳಿಕೆಯನ್ನು ಪಡೆದುಕೊಂಡೆ.

ದಿಃ 22-4-2022 ರಂದು ಈ ಪ್ರಕರಣದಲ್ಲಿ ಆರೋಪಿಯಾಗಿರುವ 2 ಮತ್ತು 3 ರವರ ಸ್ವಇಚ್ಛಾ ಹೇಳಿಕೆಗಳನ್ನು ಪಡೆದುಕೊಂಡೆ.

ದಿಃ 5-6-2022 ರಂದು 1 ನೇ ಆರೋಪಿ ವಿದ್ಯಾಭ್ಯಾಸ ಮಾಡಿದ್ದ ಶಾಲೆಯ ದಾಖಲಾತಿ ನೀಡುವಂತೆ ಮುಖ್ಯೋಪಾಧ್ಯಾಯರಿಗೆ ಮನವಿ ಸಲ್ಲಿಸಿದ್ದೆ.

ದಿಃ 7-7-2022 ರಂದು ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಚಾಸಾ 2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 10-30 ರಿಂದ 11-30 ರವರೆಗೆ ನಿಪಿ-9 ರಂತೆ ಜರುಗಿಸಿರುತ್ತೇನೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನುನಿಪಿ-9(ಬಿ) ಎಂದು

ಗುರುತಿಸಲಾಯಿತು. ಅದೇ ಕಾಲಕ್ಕೆ ನಿಪಿ-10 ಮತ್ತು 11 ರ ಫೋಟೋಗಳನ್ನು ತೆಗೆಸಿದ್ದೇನೆ. ಅದೇ ಕಾಲಕ್ಕೆ ಕಚ್ಚಾ ನಕಾಶೆಯನ್ನು ತಯಾರು ಮಾಡಿದ್ದೇನೆ. ಅದನ್ನು ಈಗ ಗುರುತಿಸಿದ್ದು ಅದನ್ನು ನಿಪಿ-49 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-49(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ಮೊದಲು ಸಾಕ್ಷಿದಾರರಿಗೆ ನೋಟೀಸ್ ಕೊಡಲಾಗಿತ್ತು. ಅದು ನಿಪಿ-8 ಆಗಿರುತ್ತದೆ. ಅದೇ ದಿವಸ ಚಾಸಾ 6 ರಿಂದ 8 ರವರನ್ನು ಬರಮಾಡಿಕೊಂಡು ಅವರ ಹೇಳಿಕೆಗಳನ್ನು ಪಡೆದುಕೊಂಡೆ. ಸದರಿಯವರು ನಿಪಿ-6, 7 ಮತ್ತು 25 ರಂತೆ ಹೇಳಿಕೆಗಳನ್ನು ಕೊಟ್ಟಿದ್ದಾರೆ.

ದಿಃ 17-7-2022 ರಂದು 1 ನೇ ಆರೋಪಿ ಓದಿದ ಸಿರುಗುಪ್ಪ ತಾಲ್ಲೂಕು ಅಗಸನೂರು ಸರಕಾರಿ ಶಾಲೆಯ ಚಾಸಾ 9 ರವರು ನಿಪಿ-18 ರಂತೆ ದಾಖಲೆಗಳನುನ ಸಲ್ಲಿಸಿದ್ದಾರೆ.

ದಿಃ 21-11-2022 ರಂದು ಚಾಸಾ 4 ಮತ್ತು 5 ರವರನ್ನು ವಿಚಾರಿಸಿ ಅವರ ಹೇಳಿಕೆಗಳನ್ನುಪಡೆದಿದ್ದೆ. ಅದೇ ದಿವಸ ಚಾಸಾ 10 ರವರು 1 ನೇ ಆರೋಪಿಯ ಮಗ ರಾಘವೇಂದ್ರ ರವರ ದಾಖಲಾತಿಗಳನ್ನು ದೃಢೀಕರಿಸಿದ ಬಗ್ಗೆ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಸದರಿ ದಾಖಲೆ ನಿಪಿ-21 ರಿಂದ 24 ಆಗಿರುತ್ತವೆ.

ದಿಃ 1-12-2022 ರಂದು ನನಗೆ ವರ್ಗಾವಣೆಯಾದ ಕಾರಣ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 19 ರವರಿಗೆ ವರ್ಗಾಯಿಸಿರುತ್ತೇನೆ.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಹೆಚ್ ಇ ವಕೀಲರಿಂದಃ</u>**

ಈ ಪ್ರಕರಣದ ಬಗ್ಗೆ ಜಾತಿ ಬಗ್ಗೆ ವಿಚಾರಣೆಯಾಗಿದ್ದು ನಂತರ ಪಿ ಎಸ್ ಐ ಜಯರತ್ನಮ್ಮ ರವರು ದೂರು ಕೊಟ್ಟಿರುತ್ತಾರೆ. ನಿಪಿ-1 ರ ದೂರಿನಲ್ಲಿ ಅರ್ಜಿದಾರರಾದ ಶ್ರೀ ರಾಮಾಂಜಿನೇಯಲು ಜಿಲ್ಲಾಧ್ಯಕ್ಷರು, ಡಾ.ಬಿ.ಆರ್.ಅಂಬೇಡ್ಕರ್ ಜಾತ್ಯಾತೀತ ಯುವ ಸಂಘ ರವರು ನೀಡಿದ ಮಾಹಿತಿ ಮೇರೆಗೆ ಎಂದು ನಮೂದಾಗಿದೆ ಎಂದರೆ ಸರಿ. ಸದರಿ ವ್ಯಕ್ತಿಯನ್ನು ನಾನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡೆ.

ದಿಃ 21-4-2022 ರಂದು ತಹಸೀಲ್ದಾರ್ ರವರು ಹೇಳಿಕೆಯನ್ನುಕೊಟ್ಟಿಲ್ಲ. ಅದನ್ನು ನಾನೇ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-9 ನ್ನು ನಾನು ಸ್ಥಳಕ್ಕೆ ಹೋಗಿ ತಯಾರು ಮಾಡಿಲ್ಲ ಕಚೇರಿಯಲ್ಲೇ ಕುಳಿತು ಕೇಸಿಗಾಗಿ ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-10 ಮತ್ತು 11 ರ ರಲ್ಲಿ ದಿನಾಂಕ ಮತ್ತು ಸಮಯ ಕಾಣಿಸುತ್ತಿಲ್ಲ ಎಂದರೆ ಸರಿ. ನಿಪಿ-49 ರ ನಕ್ಷೆಯಲ್ಲಿ

ಸಾಕ್ಷಿದಾರರ ಸಹಿ ಪಡೆದಿಲ್ಲ ಎಂದರೆ ಸರಿ. ನಿಪಿ-49 ರಲ್ಲಿ ಯಾವ ಸ್ಥಳದಲ್ಲಿ ಕೃತ್ಯ ನಡೆದಿದೆ ಎನ್ನುವ ಬಗ್ಗೆ ತೋರಿಸಿಲ್ಲ ಎಂದರೆ ಕಟ್ಟಡದ ನಕ್ಷೆಯನ್ನು ತಯಾರು ಮಾಡಲಾಗಿದೆ ಎಂದು ನುಡಿದಿದ್ದಾರೆ. ಅಗಸನೂರು ಶಾಲೆಯ ಮುಖ್ಯೋಪಾಧ್ಯಾಯರು ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ ಅವುಗಳನ್ನು ನಾನೇ ಕೇಸಿಗಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-14 ರಲ್ಲಿ ಕ್ರಮಸಂಖ್ಯೆ 12 ನ್ನು ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ಕ್ರಮ ಸಂಖ್ಯೆ 14 ರಿಂದ ನಮೂದು ಇಲ್ಲ ಎಂದರೆ ಈ ಕೇಸಿಗೆ ಎಷ್ಟು ಮಾಹಿತಿ ಬೇಕು ಅಷ್ಟನ್ನು ಕೊಟ್ಟಿದ್ದಾರೆ ಎಂದು ನುಡಿದಿದ್ದಾರೆ. ನಿಪಿ-14 ರಲ್ಲಿ ದಿಃ 1-6-1968 ರ ದಿನಾಂಕ ಇದೆ ಎಂದರೆ ಸರಿ. ಅವರ ಗುರುತಿನ ಚೀಟಿಯಲ್ಲಿ ಜನ್ಮ ದಿನಾಂಕ 22-12-1974 ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಕೇಸಿಗೆ ಅನುಕೂಲವಾಗಲಿ ಎನ್ನುವ ರೀತಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ರಾಘವೇಂದ್ರ ರವರಿಗೆ ಸಂಬಂಧಪಟ್ಟ ಶಾಲಾ ದಾಖಲಾತಿಗಳಲ್ಲಿ ತಾಯಿಯ ಹೆಸರು ನಮೂದಾಗಿಲ್ಲ ಎಂದರೆ ಸರಿ. ಎಲ್ಲಾ ದಾಖಲಾತಿಗಳಲ್ಲಿ ಗೀತಾರವರ ಗಂಡನ ಹೆಸರು ನಾಗೇಶ್ ಎಂದು ನಮೂದಾಗಿದೆ ಎಂದರೆ ಅದು ನಿಜ ಹಾಗೂ ನಮ್ಮ ತನಿಖೆಯ ಪ್ರಕಾರ ಅವರು ಮೊದಲು ವೇಣುಗೋಪಾಲ್ ರವರನ್ನು ಮದುವೆಯಾಗಿದ್ದು ನಂತರ ನಾಗೇಶ್ ರವರನ್ನು ಮದುವೆಯಾಗಿ ಅವರ ಹೆಸರಿನ ದಾಖಲೆಗಳ ಆಧಾರದಲ್ಲಿ ಸುಳ್ಳು ಜಾತಿ ದೃಢೀಕರಣ ಪತ್ರ ಪಡೆದಿರುವುದು ಕಂಡು ಬಂದಿದೆ ಎಂದು ನುಡಿದಿದ್ದಾರೆ. ಗೀತಾರವರು ವೇಣುಗೋಪಾಲ್ ರವರನ್ನು ಮದುವೆಯಾಗಿದ್ದ ಬಗ್ಗೆ ಯಾವುದೇ ದಾಖಲೆಯನ್ನು ನಾನು ಸಂಗ್ರಹಿಸಿಲ್ಲ. ಗೀತಾ ವೇಣುಗೋಪಾಲ್ ಎನ್ನುವವರು ಬೇರೆ ಹಾಗೂ ಈ ಕೇಸಿನ 1ನೇ ಆರೋಪಿ ಬೇರೆಯಾಗಿದ್ದರೂ ಸಹ ಅವರ ವಿರುದ್ಧ ಸುಳ್ಳು ದಾಖಲೆ ಸೃಷ್ಟಿ ಮಾಡಿ ಕೇಸು ಹಾಕಲಾಗಿದೆ ಎಂದರೆ ಸರಿಯಲ್ಲ. 1 ನೇ ಆರೋಪಿ ತಾನು ಎಸ್ ಟಿ ಜನಾಂಗಕ್ಕೆ ಸೇರಿದ್ದೇನೆ ಎಂದು ಎಲ್ಲಿಯೂ ಘೋಷಣಾ ಪತ್ರ ಸಲ್ಲಿಸಿಲ್ಲ ಎಂದರೆ ಸರಿ.

1 ನೇ ಆರೋಪಿ ಎಸ್ ಟಿ ಜಾತಿಯ ದೃಢೀಕರಣ ಪತ್ರ ಪಡೆಯಲು ಅರ್ಜಿ ಸಲ್ಲಿಸಿದ್ದರೋ ಇಲ್ಲವೋ ಎನ್ನುವ ಬಗ್ಗೆ ದಾಖಲೆ ಸಿಗಲಿಲ್ಲ. ಒಂದು ಜಾತಿ ದೃಢೀಕರಣ ಪತ್ರಕ್ಕೆ ಅರ್ಜಿ ಸಲ್ಲಿಸಿದಾಗ 4 ಹಂತದ ವರದಿ ಪಡೆಯುತ್ತಾರೆ ಎಂದರೆ ಸರಿ. ಎಲ್ಲಾ ಮಾಹಿತಿಗಳು ಸರಿಯಾದ್ದರೆ ಮಾತ್ರ ಜಾತಿ ದೃಢೀಕರಣ

ಪತ್ರ ಕೊಡುತ್ತಾರೆ ಇಲ್ಲದಿದ್ದರೆ ಇಲ್ಲ ಎಂದರೆ ಅದಕ್ಕೆ ಉತ್ತರ ಕೊಡಲು ಆಗುವುದಿಲ್ಲ ಎಂದು ನುಡಿದಿದ್ದಾರೆ. ಯಾವುದೇ ಜಾತಿ ದೃಢೀಕರಣ ಪತ್ರವನ್ನು ಅಭಿಲೇಖಾಲಯದಲ್ಲಿ ಕೆಲವು ವರ್ಷ ನಿರ್ವಹಣೆ ಮಾಡುತ್ತಾರೆ ಎಂದರೆ ಸರಿ. 1 ನೇ ಆರೋಪಿ ಯಾವುದೇ ಜಾತಿ ದೃಢೀಕರಣ ಪತ್ರಕ್ಕೆ ಅರ್ಜಿ ಸಲ್ಲಿಸಿಲ್ಲ ಆದ್ದರಿಂದ ದಾಖಲೆ ಲಭ್ಯವಿಲ್ಲ ಎಂದರೆ ಸರಿಯಲ್ಲ.

2011 ರಲ್ಲಿ 1 ನೇ ಆರೋಪಿ ಕೇವಲ ದೂರನ್ನು ಮಾತ್ರ ಸಲ್ಲಿಸಿದ್ದರು ಯಾವುದೇ ಅನುದಾನ ಪಡೆದಿರಲಿಲ್ಲ ಎಂದರೆ ಸರಿಯಲ್ಲ. ದೂರು ಕೊಡುವಾಗ ಸಲ್ಲಿಸಿದ ದಾಖಲಾತಿಗಳನ್ನು ದುರುಪಯೋಗ ಮಾಡಿಕೊಂಡು ಈ ರೀತಿ ಸುಳ್ಳು ಕೇಸು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮತ್ತು 1 ನೇ ಆರೋಪಿಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ರಾಮಾಂಜಿನೇಯ ಎನ್ನುವವರು ಸಲ್ಲಿಸಿದ ದೂರಿನ ಆಧಾರದಲ್ಲಿ ಯಾವುದೇ ತಪ್ಪು ಮಾಡದೆ ಇದ್ದರೂ ಸಹ ಆರೋಪಿಗಳ ವಿರುದ್ಧ ವಿನಾ ಕಾರಣ ಸುಳ್ಳು ದೂರು ದಾಖಲಿಸಿ ಕಿರುಕುಳ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. 1 ನೇ ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಂ ಹೆಚ್ ಆರ್ ವಕೀಲರಿಂದಃ</u>**

ನಾನು ಈ ಪ್ರಕರಣದ ದೂರನ್ನು ಓದಿಕೊಂಡಿದ್ದೇನೆ. ನಿರ್ದೇಶಕರು ನಾಗರಿಕ ಜಾತಿ ನಿರ್ದೇಶನಾಲಯ ರವರ ಆದೇಶದ ಪ್ರತಿಯನ್ನು ನೋಡಿದ್ದೇನೆ. ನಿಪಿ-2 ರ ಪ್ರಕಾರ ಶ್ರೀಮತಿ ಗೀತಾ ಗಂಡ ವೇಣುಗೋಪಾಲ್ ರವರ ವಿರುದ್ಧ ಭಾರತೀಯ ದಂಡ ಸಂಹಿತಾ ರೀತ್ಯಾ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಆದೇಶ ಮಾಡಿದ್ದಾರೆ ಎಂದರೆ ಸರಿ. ದೂರಿನಲ್ಲಿ ಹೇಳಿರುವ ಶ್ರೀ ರಾಮಾಂಜಿನೇಯರವನ್ನು ನಾನು ವಿಚಾರಣೆ ಮಾಡಿಲ್ಲ. ಸದರಿ ವ್ಯಕ್ತಿ ಸಂತ್ರಸ್ಥ ವ್ಯಕ್ತಿಯೋ ಅಲ್ಲವೋ ಎನ್ನುವ ಬಗ್ಗೆಯೂ ನಾನು ವಿಚಾರಣೆ ಮಾಡಿಲ್ಲ. ದೂರಿನಲ್ಲಿ ಆರೋಪಿ 2 ರಿಂದ 5 ರವರ ಬಗ್ಗೆ ಹೇಳಿಲ್ಲ ಎಂದರೆ ಸರಿ. ಜಾತಿ ದೃಢೀಕರಣ ಪತ್ರ ನೀಡುವ ಮೊದಲು ತಹಸೀಲ್ದಾರ್ ರವರು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿ ವರದಿ ನೀಡುವಂತೆ ನೀಡಿರುವ ಆದೇಶದ ಪ್ರತಿಯನ್ನು ಪಡೆದು ಹಾಜರು ಮಾಡಿಲ್ಲ. ಆರೋಪಿ 2 ಮತ್ತು 3 ರವರು ಯಾವುದೇ ಸ್ಥಳಕ್ಕೆ ಹೋಗಿ

ತನಿಖೆ ಮಾಡಿ ವರದಿ ನೀಡಿಲ್ಲ ಹಾಗೂ ಅವರ ಪಾತ್ರ ಯಾವುದೂ ಇಲ್ಲ ಆದರೂ ಸಹ ಸುಳ್ಳು ಕೇಸು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯಲ್ಲಿ ಆಗಿರುವ ನಡವಳಿಕೆಯನ್ನು ನಾನು ನೋಡಿಲ್ಲ. ನಿಪಿ-3 ರ ಪ್ರಕಾರ ಶ್ರೀಮತಿ ಗೀತಾ ರವರ ಜಾತಿ ದೃಢೀಕರಣ ಪತ್ರವನ್ನು ರದ್ದು ಪಡಿಸಲು ಮಾತ್ರ ಆದೇಶ ಆಗಿದೆ ಎಂದರೆ ಸರಿ. ಸದರಿ ದಾಖಲೆಯ ಪ್ರಕಾರ ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವ ಬಗ್ಗೆ ಆದೇಶ ಇಲ್ಲ ಎಂದರೆ ಸರಿ. ಈಗ ತೋರಿಸಿದ ನಿಪಿ-33 ರ ದಾಖಲೆಯನ್ನು ತನಿಖೆಯ ಕಾಲಕ್ಕೆ ನಾನೇ ಪಡೆದುಕೊಂಡಿದ್ದೇನೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ದಿಃ 27-11-2002 ಎಂದು ಬರೆಯಲಾಗಿದೆ ಎಂದರೆ ಸರಿ. ಸದರಿ ದಾಖಲೆ 1 ನೇ ಆರೋಪಿಯ ಜಾತಿ ಪ್ರಮಾಣ ಪತ್ರ ಎಂದರೆ ಸರಿ. ಸದರಿ ದಾಖಲೆಯನ್ನು ಪಡೆದ ನಂತರ ಸದರಿ ದಾಖಲೆಯನ್ನು ನೀಡಿದಂತಹ ತಹಸೀಲ್ದಾರ್ ರವರನ್ನು ನಾನು ವಿಚಾರಣೆ ಮಾಡಿಲ್ಲ. 2 ಮತ್ತು 3 ನೇ ಆರೋಪಿಗಳು ನಾನು ಹೇಳುವಂತಹ ಯಾವುದೇ ಹೇಳಿಕೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 215/2024**

**ಪ್ರಾಸಾಃ- 16 ಚಾಸಾಃ- 19**

| | | |
|---|---|---|
| ಸಾಕ್ಷಿಯ ಹೆಸರು | : | ಹನುಮಂತಪ್ಪ |
| ತಂದೆಯ ಹೆಸರು | : | ಮಹಂಶೇಶ್ ಸೀರಿಹಳ್ಳಿ |
| ವಯಸ್ಸು | : | 41 ವರ್ಷ |
| ವೃತ್ತಿ | : | ಪಿ ಐ, ತಳುಕು ವೃತ್ತ, ಚೆಳ್ಳಕೆರೆ |
| ವಾಸಸ್ಥಳ | : | ಚೆಳ್ಳಕೆರೆ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 20.6.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ದಿಃ 1-12-2022 ರಿಂದ 29-8-2024 ರವರೆಗೆ ನಾನು ದಾವಣಗೆರೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ ದಾವಣಗೆರೆಯಲ್ಲಿ ಪಿ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ಈ ಪ್ರಕರಣದ ಕಡತವನ್ನು ಚಾಸಾ 18 ರವರಿಂದ ದಿಃ 1-12-2022 ರಂದು ಸ್ವೀಕರಿಸಿ ಅದುವರೆಗೆ ಆಗಿದ್ದ ತನಿಖೆಯ ಪ್ರಗತಿಯನ್ನು ಪರಿಶೀಲಿಸಿ ದಿಃ 12-12-2022 ರಂದು ಸಿರುಗುಪ್ಪ ತಹಸೀಲ್ದಾರ್ ರವರಿಂದ 1 ನೇ ಆರೋಪಿಗೆ ಸೇರಿದ ಜಾತಿ ಪ್ರಮಾಣ ಪತ್ರ ಮತ್ತು ವಂಶ ವೃಕ್ಷವನ್ನು ಪಡೆದುಕೊಂಡೆ. ಸದರಿ ದಾಖಲೆಗಳು ನಿಪಿ-35 ರಿಂದ ನಿಪಿ-37 ಆಗಿರುತ್ತವೆ.

ದಿಃ 13-12-2022 ರಂದು ಚಾಸಾ 12 ರವರ ಹೇಳಿಕೆ ಪಡೆದುಕೊಂಡೆ. ದಿಃ 2-1-2023 ರಂದು 1 ನೇ ಆರೋಪಿಯ ಹೆಸರಿಗೆ ಜಾತಿ ಪ್ರಮಾಣ ಪತ್ರವನ್ನು ಕೊಡುವಾಗ ಗ್ರಾಮ ಲೆಕ್ಕಾಧಿಕಾರಿಯವರು ಸಲ್ಲಿಸಿದ್ದ ವರದಿ ಬಗ್ಗೆ ಅವರ ಹೆಸರು ಮತ್ತು ವಿಳಾಸವನ್ನು ಸಿರುಗುಪ್ಪ ತಹಸೀಲ್ದಾರ್ ರವರಿಂದ ನಿಪಿ-41 ರ ಪ್ರಕಾರ ಪಡೆದುಕೊಂಡೆ.

ದಿಃ 28-2-2023 ರಂದು 1 ನೇ ಆರೋಪಿಯ ಹೆಸರಿಗೆ ಜಾತಿ ಪ್ರಮಾಣ ಪತ್ರವನ್ನು ನೀಡಿದ ತಹಸೀಲ್ದಾರ್ ಶಶಿಧರ್ ಬಗಲಿ ಮತ್ತು ವರದಿ ನೀಡಿದ್ದ ಕಂದಾಯ ಅಧಿಕಾರಿ ಮಲ್ಲಿಕಾರ್ಜುನ್ ಮತ್ತು ನಂದೀಶ್ವರ್ ರವರನ್ನು ಅಭಿಯೋಜನೆಗೆ ಒಳಪಡಿಸುವ ಬಗ್ಗೆ ಮಾನ್ಯ ಎಸ್ ಪಿ ರವರ ಮೂಲಕ

ಸರಕಾರಕ್ಕೆ ಮತ್ತು ಜಿಲ್ಲಾಧಿಕಾರಿ, ಬಳ್ಳಾರಿ ರವರಿಗೆ ಮನವಿ ಸಲ್ಲಿಸಿದೆ. ಸದರಿ ಎರಡು ಪತ್ರಗಳನ್ನು ನಿಪಿ-50 ಮತ್ತು 51 ಎಂದು ಗುರುತಿಸಲಾಯಿತು. ಮತ್ತೊಂದು ಪತ್ರವನ್ನು ನಿಪಿ-52 ಎಂದು ಎಸ್ ಪಿ ರವರ ಬರೆದ ಪತ್ರಗಳನ್ನು ನಿಪಿ-53 ಎಂದು ಹಾಗೂ ತಹಸೀಲ್ದಾರ್ ರವರಿಗೆ ಬರೆದ 2 ಪತ್ರಗಳನ್ನು ನಿಪಿ-54 ಮತ್ತು 55 ಎಂದು ಗುರುತಿಸಲಾಯಿತು.

ದಿಃ 11-10-2023 ರಂದು ಚಾಸಾ 13 ರವರ ಹೇಳಿಕೆಯನ್ನು ಪಡೆದುಕೊಂಡೆ. ಸದರಿ ಹೇಳಿಕೆಯನ್ನು 1 ನೇ ಆರೋಪಿ ನಕಲಿ ಜಾತಿ ಪತ್ರದ ಆಧಾರದಲ್ಲಿ ಪೋಲೀಸರ ವಿರುದ್ದ ದೂರು ಸಲ್ಲಿಸಿದ್ದರ ಬಗ್ಗೆ ತೆಗೆದುಕೊಂಡೆ.

ದಿಃ 21-10-2023 ರಂದು ಬಳ್ಳಾರಿ ಜಿಲ್ಲಾಧಿಕಾರಿಯವರು ಅಭಿಯೋಜನೆ ಅನುಮತಿ ಪತ್ರವನ್ನು ಸಲ್ಲಿಸಿದರು.

ದಿಃ 21-11-2023 ರಂದು 1 ನೇ ಆರೋಪಿಗೆ ನೋಟೀಸ್ ನೀಡಿ ನಂತರ ಅವರು 22-11-2023 ರಂದು ನನ್ನ ಮುಂದೆ ಹಾಜರಾಗಿ ಸ್ವಇಚ್ಛಾ ಹೇಳಿಕೆಯನ್ನು ನೀಡಿದರು.

ದಿಃ 22-1-2024 ರಂದು ಬಳ್ಳಾರಿ ಗಾಂಧಿನಗರ ಪೋಲೀಸ್ ಠಾಣೆ ಗುನ್ನೆ ನಂಃ 359/2013 ರಲ್ಲಿ ಸಲ್ಲಿಸಿದ್ದ ದೂರಿನ ಬಗ್ಗೆ ಪ್ರಥಮ ವರ್ತಮಾನ ವರದಿ ಪಡೆದುಕೊಂಡೆ. ದೂರನ್ನು ನಿಪಿ-56 ಮತ್ತು ಪ್ರಥಮ ವರ್ತಮಾನ ವರದಿಯನ್ನು ನಿಪಿ-57 ಎಂದು ಗುರುತಿಸಲಾಯಿತು. ಸದರಿ ಪ್ರಕರಣದಲ್ಲಿ ಸಲ್ಲಿಸಿದ ಅಂತಿಮ ವರದಿಯನ್ನು ನಿಪಿ-58 ಎಂದು ಗುರುತಿಸಲಾಯಿತು.

ದಿಃ 8-2-2024 ರಂದು 4 ನೇ ಆರೋಪಿ ಗೋಪಾಲ್ ಶೆಟ್ಟಿ ರವರ ಮರಣ ಹೊಂದಿದ ಬಗ್ಗೆ ಅವರ ಮರಣ ಪತ್ರವನ್ನು ನೀಡಲು ತಹಸೀಲ್ದಾರ್ ರವರಿಗೆ ಮನವಿ ಸಲ್ಲಿಸಿದೆ.

ದಿಃ 26-2-2024 ರಂದು 3 ನೇ ಆರೋಪಿಯ ಸೇವಾ ಪುಸ್ತಕ ನೀಡಲು ಬಳ್ಳಾರಿ ತಹಸೀಲ್ದಾರ್ ರವರಿಗೆ  ಮನವಿ ಸಲ್ಲಿಸಿದೆ.ಸದರಿ ಪತ್ರ ನಿಪಿ-54 ಆಗಿದೆ.

ದಿಃ 28-2-2024 ರಂದು 3 ನೇ ಆರೋಪಿಗೆ ಸಂಬಂಧಪಟ್ಟ ಸೇವಾ ಪುಸ್ತಕವನ್ನು ಮತ್ತು ಜಾತಿ ಪ್ರಮಾಣ ಪತ್ರವನ್ನು ತಹಸೀಲ್ದಾರ್ ರವರಿಂದ ಪಡೆದುಕೊಂಡೆ. ಸದರಿ ದಾಖಲೆ ನಿಪಿ-38 ರಿಂದ 40 ಆಗಿರುತ್ತವೆ. ಅದೇ ದಿವಸ 4 ನೇ ಆರೋಪಿಗೆ ಸೇರಿದ ಮರಣ ಸಮರ್ಥನಾ ಪತ್ರವನ್ನು ಪಡೆದುಕೊಂಡೆ. 1 ನೇ ಆರೋಪಿಗೆ ಸಂಬಂಧಪಟ್ಟ ಜಾತಿ ದಾಖಲಾತಿಗಳನ್ನು ಪರಿಶೀಲನೆ ಮಾಡಿದ್ದ

ಬಗ್ಗೆ ನಮ್ಮ ಕಚೇರಿಯಿಂದ ದಾಖಲೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿದ್ದೆ. ಸದರಿ ದಾಖಲೆಗಳನ್ನು ನಿಪಿ-59 ಎಂದು ಗುರುತಿಸಲಾಯಿತು. ಅಲ್ಲಿಗೆ ತನಿಖೆ ಮುಕ್ತಾಯ ಆದ ಕಾರಣ ಆರೋಪಿಗಳ ವಿರುದ್ದ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದ ಕಾರಣ ಹಾಗೂ ಶಶಿಧರ ಬಗಲಿ ರವರಿಗೆ ಸಂಬಂಧಪಟ್ಟ ಅಭಿಯೋಜನೆ ಅನುಮತಿ ಬರದೇ ಇದ್ದ ಕಾರಣ ಉಳಿದ 3 ಜನ ಆರೋಪಿಗಳ ವಿರುದ್ದ ದೋಷಾರೋಪಣಾ ವರದಿ ಸಲ್ಲಿಸಿದ್ದೆ.

<u>**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಹೆಚ್ ಎ ವಕೀಲರಿಂದಃ**</u>

ಮೂಲ ದೂರಿಗೆ ಸಂಬಂಧಪಟ್ಟಂತೆ ಶ್ರೀ ರಾಮಾಂಜಿನೇಯ ರವರನ್ನು ವಿಚಾರಣೆ ಮಾಡಿಲ್ಲ ಎಂದರೆ ಸರಿ. ಈ ಪ್ರಕರಣದ ದೂರನ್ನು ಯಾವ ದಿನಾಂಕದಂದು ನೊಂದಾಯಿಸಲಾಗಿದೆ ಎನ್ನುವ ಬಗ್ಗೆ ನನ್ನ ಗಮನದಲ್ಲಿದೆ ಎಂದರೆ ಸರಿ. 1 ನೇ ಆರೋಪಿಗೆ ಸಂಬಂಧಪಟ್ಟ ವಂಶವೃಕ್ಷ ಹಾಗೂ ಜಾತಿ ಪತ್ರವನ್ನು ನಮ್ಮ ಕೇಸಿಗೆ ಅನುಕೂಲವಾಗುವ ರೀತಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯಲ್ಲಿ ಹನಮಂತ ರೆಡ್ಡಿ ಮತ್ತು ಯೆಂಕಮ್ಮ ರವರಿಗೆ ಸಂತಾನ ಇರುವುದಿಲ್ಲ ಎಂದು ನಮೂದಾಗಿದೆ ಎಂದರೆ ಸರಿ. ಆದರೆ ಹನಮಂತ ರೆಡ್ಡಿ ರವರ 2 ನೇ ಹೆಂಡತಿ ಕುಪ್ಪಮ್ಮ ರವರಿಗೆ 1 ನೇ ಆರೋಪಿ ಜನಿಸಿರುವ ಬಗ್ಗೆ ದಾಖಲೆ ಇದೆ. ಕುಪ್ಪಮ್ಮ ರವರು ಹನಮಂತ ರೆಡ್ಡಿ ರವರಿಗೆ 2 ನೇ ಹೆಂಡತಿ ಆಗಿದ್ದರುಎನ್ನುವ ಬಗ್ಗೆ ಗುರುತಿನ ಚೀಟಿಯನ್ನು ಪಡೆದಿಲ್ಲ. ಆದರೆ ಆರೋಪಿಯ ಸ್ವಇಚ್ಚಾ ಹೇಳಿಕೆಯಲ್ಲಿ ಆ ರೀತಿ ಮಾಹಿತಿ ಕೊಟ್ಟಿದ್ದಾರೆ. 1 ನೇ ಆರೋಪಿಯ ತಂದೆಯ ಹೆಸರು ಮತ್ತು ಯಾವ ಊರು ಎಂದು ಇಲ್ಲದೇ ಇದ್ದರೂ ಸಹ ಕೇಸಿಗೆ ಪೂರಕವಾಗಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ 13 ರವರು ನಾನು ಹೇಳುವಂತೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ಹೇಳಿಕೆಯನ್ನು ನಮ್ಮ ಕಚೇರಿಯಲ್ಲಿ ನಾನೇ ತಯಾರು ಮಾಡಿಕೊಂಡಿದ್ದೇನೆ ಎಂರದೆ ಸರಿಯಲ್ಲ. 1 ನೇ ಆರೋಪಿ ಯಾವುದೆ ಹೇಳಿಕೆ ಕೊಡದೇ ಇದ್ದರೂ ಸಹ ಆ ಹೇಳಿಕೆಯನ್ನು ನಮ್ಮ ಕಚೇರಿಯಲ್ಲಿ ನಾನೇ ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-59 ರ ವರದಿಯ ಬಗ್ಗೆ 1 ನೇ ಆರೋಪಿಗೆ ಯಾವುದೇ ಮಾಹಿತಿ ಇಲ್ಲ ಆದಾಗ್ಯೂ ಸಹ ಆ ರೀತಿಯ ಸುಳ್ಳು ವರದಿಯನ್ನು ನಮ್ಮ ಕಚೇರಿಯಲ್ಲಿ ತಯಾರು ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-59 ರ ಪ್ರಕಾರ ಇರುವ ದಾಖಲೆಗಳಲ್ಲಿ 1 ನೇ ಆರೋಪಿಯದ್ದು ಎಂದು

ಹೇಳುವ ಹೇಳಿಕೆಯಲ್ಲಿ ಅವರ ಜನ್ಮ ದಿನಾಂಕ 22-12-1974 ಎಂದು ನಮೂದಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ವಿಚಾರಣೆ ಕಾಲಕ್ಕೆ ಅವರು ಕೊಟ್ಟ ಮಾಹಿತಿ ಪ್ರಕಾರ ಆ ರೀತಿ ನಮೂದಾಗಿದೆ ಎಂದು ನುಡಿದಿದ್ದಾರೆ. ಈ ಕೇಸಿನಲ್ಲಿ ನಾವು ಪಡೆದಿರುವ ಶಾಲಾ ದಾಖಲಾತಿಗಳಲ್ಲಿ 1 ನೆ ಆರೋಪಿಯ ಜನ್ಮ ದಿನಾಂಕ 1-6-1968 ಎಂದು ನಮೂದಾಗಿದೆ ಎಂದರೆ ಸರಿ. ಆಧಾರ ಕಾರ್ಡ್ ಮತ್ತು ಮತದಾರರ ಗುರುತಿನ ಚೀಟಿಯಲ್ಲಿ 1974 ಎಂದು ನಮೂದಾಗಿದೆ ಎಂದರೆ ಸರಿ. ಸಾಮಾನ್ಯವಾಗಿ ಪ್ರಾಧಿಕಾರದವರು ಅರ್ಜಿದಾರ ಕೊಡುವ ದಾಖಲೆಗಳ ಆಧಾರದಲ್ಲಿ ಹುಟ್ಟಿದ ದಿನಾಂಕವನ್ನು ನಮೂದು ಮಾಡುತ್ತಾರೆ ಎಂದರೆ ಸರಿ. 1 ನೇ ಆರೋಪಿಗೂ ಮತ್ತು ನಾನು ಪಡೆದು ಹಾಜರು ಪಡಿಸಿರುವ ದಾಖಲೆಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಸಲ್ಲಿಸಿದ್ದ ದೂರಿನಲ್ಲಿ ಜಾತಿನಿಂದನೆ ಬಗ್ಗೆ ಹೇಳಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಯಾವುದೆ ತಪ್ಪು ಮಾಡದೇ ಇದ್ದರೂ ಸಹ ಪೂರಕ ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಯಾವುದೇ ದಾಖಲಾತಿ 1 ನೇ ಆರೋಪಿಗೆ ಸಂಬಂಧ ಪಟ್ಟಿಲ್ಲದೇ ಇದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಂ ಹೆಚ್ ಆರ್ ವಕೀಲರಿಂದಃ</u>**

ನಿಪಿ-3 ರ ಪ್ರಕಾರ ಕೇವಲ 1 ನೇ ಆರೋಪಿಗೆ ಸೇರಿದ ಸುಳ್ಳು ಜಾತಿ ಪ್ರಮಾಣ ಪತ್ರವನ್ನು ರದ್ದು ಮಾಡಬೇಕೆಂದು ಆದೇಶ ಮಾಡಿದೆ ಎಂದರೆ ಸರಿ. ಜಿಲ್ಲಾ ಸಮಿತಿಯ ಅಧ್ಯಕ್ಷಕರಾದ ಜಿಲ್ಲಾಧಿಕಾರಿಗಳು ಕ್ರಿಮಿನಲ್ ಕಾಯಿದೆ ಪ್ರಕಾರ 1 ನೇ ಆರೋಪಿ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ನಮ್ಮ ಇಲಾಖೆಗೆ ಸೂಚನೆ ಕೊಟ್ಟಿಲ್ಲ.

ನಿಪಿ-33 ರ ದಾಖಲೆ ನಮ್ಮ ತನಿಖೆಯ ಕಾಲಕ್ಕೆ ಲಭ್ಯ ಆಗಿದೆ ಎಂದರೆ ಸರಿ. ಸದರಿ ದಾಖಲೆಯ ದಿನಾಂಕ 27-11-2002 ಎಂದರೆ ಸರಿ. 2002 ರ ನಂತರದ ವಿದ್ಯಮಾನಗಳ ಬಗ್ಗೆ ತನಿಖೆ ಮಾಡಿದ್ದೀರಿ ಅದಕ್ಕೂ ಮೊದಲಿನ ವಿಷಯಗಳ ಬಗ್ಗೆ ತನಿಖೆ ಮಾಡಿಲ್ಲ ಎಂದರೆ ತನಿಖೆಗೆ ಎಷ್ಟು ಅವಶ್ಯಕತೆ ಇತ್ತೋ ಅಷ್ಟನ್ನು ತನಿಖೆ ಮಾಡಿದ್ದೇವೆ ಎಂದು ನುಡಿದಿದ್ದಾರೆ. ಸದರಿ ದಾಖಲೆಯನ್ನು ನೀಡಿದಂತಹ ಆ ಕಾಲದಲ್ಲಿದ್ದ ತಹಸೀಲ್ದಾರ್ ಹಾಗೂ ಕಂದಾಯ ಅಧಿಕಾರಿಗಳನ್ನು ನಾನು

ವಿಚಾರಣೆ ಮಾಡಿಲ್ಲ. ಆ ರೀತಿಯ ದಾಖಲೆ ಲಭ್ಯ ಇದ್ದರೂ ಸಹ ಯಾರು ಮೊದಲು ನಕಲಿ ಜಾತಿ ದೃಢೀಕರಣ ಪತ್ರವನ್ನು ನೀಡಿದ್ದರೋ ಆ ಸತ್ಯವನ್ನು ಕಂಡು ಹಿಡಿಯುವ ಬದಲು ಯಾವುದೇ ಆಧಾರ ಇಲ್ಲದೇ ಕೇಸಿಗೆ ಪೂರಕ ದಾಖಲೆಗಳನ್ನು ಪಡೆದು 2 ಮತ್ತು 3 ನೇ ಆರೋಪಿಗಳ ವಿರುದ್ದಸುಳ್ಳು ದೋಷಾರೋಪಣಾ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಜಾತಿ ದೃಢೀಕರಣ ಪತ್ರದ ಬಗ್ಗೆ ತಹಸೀಲ್ದಾರ್ ರವರ ಕಚೇರಿಯಲ್ಲಿ ಪ್ರತ್ಯೇಕ ಕಡತಗಳು ಇರುತ್ತವೆ ಎಂದರೆ ಸರಿ. ನಾನು ಸದರಿ ಕಡತವನ್ನು ಪಡೆಯುವ ಬಗ್ಗೆ ಪ್ರಯತ್ನ ಮಾಡಿಲ್ಲ. 2 ಮತ್ತು 3 ನೇ ಆರೋಪಿಗಳು ಜಾತಿ ದೃಢೀಕರಣ ಬಗ್ಗೆ ಯಾವುದೇ ವರದಿಯನ್ನು ನೀಡಿಲ್ಲದೇ ಇದ್ದರೂ ಸಹ ಮತ್ತು ಯಾವುದೇ ಆಧಾರ ಇಲ್ಲದೇ ಇದ್ದರೂ ಸಹ ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಅವರ ವಿರುದ್ದ ಸುಳ್ಳು ದೋಷಾರೋಪಣಾ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿಗಳ ವಿರುದ್ದ ಯಾವುದೇ ದಾಖಲೆಗಳು ಅಥವಾ ಸಾಕ್ಷ್ಯಾಧಾರ ಕಂಡು ಬಂದಿಲ್ಲದೇ ಇದ್ದರೂ ಸಹ ಅವರಿಗೆ ತೊಂದರೆ ಕೊಡಲು ಅವರನ್ನು ಪ್ರಕರಣದಲ್ಲಿ ಸಿಲುಕಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**